# ಎತ್ತರ..ಬಾನೆತ್ತರ!

ಟರ್ಕಿಯ ರುಮೆಯ್ಸಾ ಗೆಲ್ಗಿಗೆ ಇನ್ನೂ ಹದಿನೇಳರ ಹರೆಯ. ಆದರೆ ಅವಳು ಇಂದು ಜಗತ್ತಿನ ಅತಿ ಎತ್ತರದ ಮಹಿಳೆ!

ಹೀಗೆಂದು ಗಿನ್ನೆಸ್ ಜಾಗತಿಕ ದಾಖಲೆಯೇ ದೃಢೀಕರಿಸಿದೆ. ಅವಳ ಎತ್ತರ 7 ಅಡಿ, 9 ಇಂಚು. ಟರ್ಕಿಯ ಸಫ್ರಾನ್ಬೋಲುವಿನಿಂದ 120 ಮೈಲು ದೂರದಲ್ಲಿರುವ ಅಂಕಾರಾ ಪಟ್ಟಣದಲ್ಲಿರುವ ಇವಳೀಗ ಹನ್ನೊಂದನೆ ತರಗತಿಯ ವಿದ್ಯಾರ್ಥಿನಿ. ಗೆಲ್ಗಿಯ ಹಸ್ತಗಳು 24.5 ಸೆ. ಮೀ.ಗಳಿವೆಯಾದರೆ ಪಾದಗಳು ಭರ್ತಿ ಒಂದಡಿ! ಪುರುಷರಿಗೆಂದು ತಯಾರಾಗುವ 15 ನಂಬರ್ ಚಪ್ಪಲಿ ಈಕೆಗೆ ಬೇಕು.

ಗೆಲ್ಗಿಯ ಪೋಷಕರು, ಸಹೋದರಿಯರು ಯಾರಿಗೂ ಇಷ್ಟೆತ್ತರದ ಭಾಗ್ಯವಿಲ್ಲ. ಅವರೆಲ್ಲ ಸಾಮಾನ್ಯರು. ಅನುವಂಶಿಕ ಸ್ಥಿತಿಗೆ ಸಂಬಂಧಿಸಿದ ಅತಿ ವಿರಳವಾದ ವೀವರ್ ಸಿಂಡ್ರೋಮ್ ಅವಳ ಈ ಎತ್ತರಕ್ಕೆ ಕಾರಣ. ಇದಕ್ಕಾಗಿ ಗೆಲ್ಗಿಗೆ ಹೆಮ್ಮೆಯೇನಿಲ್ಲ. ನಡಿಗೆಯ ಸಮತೋಲನಕ್ಕಾಗಿ ವಾಕರ್ ಬಳಸಬೇಕಾಗಿದೆ. ಇನ್ನು ಅವಳೇನೂ ಇದರಲ್ಲಿ ಪುರುಷರಿಗೆ ಸರಿಸಾಟಿ ಖಂಡಿತ ಅಲ್ಲ. ಅದೇ ದೇಶದಲ್ಲಿರುವ ಸುಲ್ತಾನ್ ಕೋಸೆಸ್ 8.3 ಅಡಿ ಎತ್ತರದ ದಾಖಲೆ ನಿರ್ಮಿಸಿದ್ದಾನೆ.

■ ಪ.ರಾಮಕೃಷ್ಣ ಶಾಸ್ತ್ರಿ



